# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 183 | Pages. 2 | Date: 29-05-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 183 - ಪುಟಗಳು : 2 - 29 ಮೇ 2025 ಗುರುವಾರ Ph: 8762954248 ದರ : ₹1


# ಪಠ್ಯ ಪುಸ್ತಕ ಪೂರೈಕೆ, ಸಮವಸ್ತ್ರದ್ದೇ ಚಿಂತೆ!

## ಇಂದಿನಿಂದ ಶಾಲಾ ಪ್ರಾರಂಭೋತ್ಸವ | ಅನಾರೋಗ್ಯ ಮಕ್ಕಳಿಗೆ ವಿನಾಯಿತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪ್ರಸಕ್ತ ಶೈಕ್ಷಣಿಕ ವರ್ಷಾರಂಭ ಆರಂಭವಾಗುತ್ತಿದ್ದು ಮೇ 29 ರಿಂದ ಶಾಲೆಗಳು ಆರಂಭವಾಗಲಿವೆ. ಮಕ್ಕಳು ಶುಕ್ರವಾರದಿಂದ ತರಗತಿಗೆ ಹಾಜರಾಗಲಿದ್ದಾರೆ. ಈ ವರೆಗೆ ಶೇ. 80 ರಷ್ಟು ಪಠ್ಯ ಪುಸ್ತಕ ವಿತರಿಸಲಾಗಿದೆಯಾದರೂ ಸಮವಸ್ತ್ರ ತಲುಪಿಲ್ಲ. ಬೇಸಿಗೆ ರಜೆ ಮುಗಿಸಿ ಮಕ್ಕಳು ಕಲಿಕಾ ಕೇಂದ್ರದತ್ತ ಹೆಜ್ಜೆ ಹಾಕಲು ಉತ್ಸುಕರಾಗಿದ್ದಾರೆ. ಅದೇ ರೀತಿ ವಿದ್ಯಾರ್ಥಿಗಳನ್ನು ಪ್ರೀತಿಯಿಂದ ಸ್ವಾಗತಿಸಲು ಶಿಕ್ಷಕರು ಸಜ್ಜಾಗಿದ್ದಾರೆ. ಗುರುವಾರ ಶಾಲೆಗಳು ತೆರೆಯುತ್ತವೆಯಾದರೂ ಮಕ್ಕಳು ಶುಕ್ರವಾರದಿಂದ ತರಗತಿಗೆ ಹಾಜರಾಗಲಿದ್ದಾರೆ. ಮೊದಲ ದಿನ ಬೀಗ ತೆರೆಯುವುದು, ಕೊಠಡಿಗಳ ಸ್ವಚ್ಛತೆ, ವೇಳಾ ಪಟ್ಟಿ ತಯಾರಿ, ವರ್ಷದ ಯೋಜನೆ ಹೀಗೆ ಮುಂತಾದ ಕಾರ್ಯಗಳನ್ನು ಶಿಕ್ಷಕರು ಕೈಗೊಳ್ಳಲಿದ್ದಾರೆ. ಎರಡು ತಿಂಗಳುಗಳ ಕಾಲ ಶಾಲೆಗಳು ಬಂದ್ ಆಗಿದ್ದರಿಂದ ಸ್ವಚ್ಛತೆ, ಆವರಣದಲ್ಲಿ ಬೆಳೆದಿರುವ ಗಿಡಗಂಟಿ ತೆರವುಗೊಳಿಸುವುದು ಹೀಗೆ ನಾನಾ ಕೆಲಸಗಳನ್ನು ಶಿಕ್ಷಕರು ಹಾಗೂ ಸಿಬ್ಬಂದಿ ಮಾಡುತ್ತಾರೆ.



### ಜಿಲ್ಲೆಯ ಶಾಲಾ ಮಾಹಿತಿ

ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಗೆ ಒಳಪಟ್ಟ 2218, ಸಮಾಜ ಕಲ್ಯಾಣ ಇಲಾಖೆಯ 4, ಅನುದಾನ ಸಹಿತ 46, ಅನುದಾನ ರಹಿತ 163 ಪ್ರಾಥಮಿಕ ಶಾಲೆಗಳು, ಶಿಕ್ಷಣ ಇಲಾಖೆಯ 48, ಅನುದಾನ ಸಹಿತ 126, ಅನುದಾನ ರಹಿತ 165 ಪ್ರೌಢ ಶಾಲೆ ಸೇರಿ ಒಟ್ಟು 3013 ಶಾಲೆಗಳಿವೆ.

### ಮಕ್ಕಳ ಆರೋಗ್ಯದ ಮೇಲೆ ನಿಗಾ

ಪ್ರಸಕ್ತ ಸಾಲಿನ ತರಗತಿ ಆರಂಭಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆಯಾದರೂ ನಿರಂತರ ಮಳೆ ಹಾಗೂ ಕೋವಿಡ್ ಭೀತಿಯಿಂದ ಮಕ್ಕಳು ಶಾಲೆಗೆ ನಿಯಮಿತವಾಗಿ ಬರುವುದು ಅನುಮಾನ. ಕೋವಿಡ್ ಕಾರ್ಮೋಡ ಕವಿದಿರುವುದರಿಂದ ಸರ್ಕಾರವೇ ಅನಾರೋಗ್ಯದಿಂದ ಬಳಲುವ ಮಕ್ಕಳಿಗೆ ರಜೆ ಘೋಷಿಸಿದೆ. ಈ ನಿಟ್ಟಿನಲ್ಲಿ ಶಿಕ್ಷಕರಿಗೂ ಸೂಚನೆ ನೀಡಿದ್ದು ಜ್ವರ, ಶೀತ, ಕೆಮ್ಮು ಮತ್ತಿತರ ಆರೋಗ್ಯ ಸಮಸ್ಯೆಯಿಂದ ಬಳಲುವ ಮಕ್ಕಳಿಗೆ ರಜೆ ನೀಡುವಂತೆ ಆದೇಶಿಸಲಾಗಿದೆ.

### ಸಮವಸ್ತ್ರ ಇಲ್ಲ

ಜಿಲ್ಲೆಯಲ್ಲಿ ಪ್ರಾಥಮಿಕ ಹಾಗು ಪ್ರೌಢ ಶಾಲೆಗೆ ಪ್ರವೇಶ ಪಡೆದಿರುವ ಅಂದಾಜು ವಿದ್ಯಾರ್ಥಿಗಳ ಸಂಖ್ಯೆ 2 ಲಕ್ಷದಷ್ಟಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬಳಿಕ ಶಾಲೆಯಿಂದ ಸುಮಾರು 20 ಸಾವಿರ ಮಕ್ಕಳು ಹೊರಗಿದ್ದು ಮೊದಲನೇ ತರಗತಿಗೆ ಅಷ್ಟೇ ಪ್ರಮಾಣದಲ್ಲಿ ಪ್ರವೇಶ ಪಡೆಯುತ್ತಾರೆ. ಹೀಗಾಗಿ 2.20 ಲಕ್ಷ ಮಕ್ಕಳ ಪಠ್ಯ ಪುಸ್ತಕ ಹಾಗೂ ಸಮವಸ್ತ್ರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಈಗಾಗಲೇ ಶೇ. 80 ರಷ್ಟು ಪಠ್ಯ ಪುಸ್ತಕ ಸರಬರಾಜು ಆಗಿದೆಯಾದರೂ ಸಮವಸ್ತ್ರ ಇನ್ನೂ ಪೂರೈಕೆಯಾಗಿಲ್ಲ. ಈ ವಾರದಲ್ಲಿ ಪೂರೈಕೆಯಾಗುವ ಸಾಧ್ಯತೆಯಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಎಸ್. ಚಂದ್ರಶೇಖರ್ ಹೇಳಿದರು.

ಪ್ರಸಕ್ತ ಶೈಕ್ಷಣಿಕ ವರ್ಷದ ತರಗತಿಗಳು ಆರಂಭವಾಗುತ್ತಿರುವುದರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯು ಎಲ್ಲಾ ಶಾಲೆಗಳಿಗೆ ಪಠ್ಯ ಪುಸ್ತಕ ವಿತರಣೆ ಕಾರ್ಯ ಕೈಗೊಂಡಿದ್ದು ಇದುವರೆಗೆ ಶೇ. 80 ರಷ್ಟು ಪಠ್ಯ ಪುಸ್ತಕಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಶಾಲೆಗಳಿಗೆ ತಲುಪಿಸಲಾಗಿದೆ. ಒಟ್ಟು 13,37,683 ಉಚಿತ ಹಾಗೂ 9,38,488 ಮಾರಾಟ ಪುಸ್ತಕಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಲ್ಲಿ 9,26,990 ಉಚಿತ ಹಾಗೂ 7,23,606 ಮಾರಾಟದ ಪುಸ್ತಕಗಳು ಲಭ್ಯವಾಗಿದ್ದು ಎಲ್ಲವನ್ನೂ ವಿತರಣೆ ಮಾಡಲಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷಾರಂಭಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಶೇ. 80 ರಷ್ಟು ಪಠ್ಯ ಪುಸ್ತಕ ವಿತರಿಸಲಾಗಿದೆ. ಸಮವಸ್ತ್ರಗಳನ್ನು ಈ ವಾರದಲ್ಲಿ ವಿತರಿಸಲಾಗುವುದು. ಗುರುವಾರ ಶಿಕ್ಷಕರಷ್ಟೇ ಆಗಮಿಸಿ ಪೂರ್ವ ಸಿದ್ಧತೆ ಮಾಡಿಕೊಳ್ಳುತ್ತಾರೆ. ಮಕ್ಕಳನ್ನು ಸ್ವಾಗತಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ.

**- ಹೆಚ್.ಎಸ್. ಚಂದ್ರಶೇಖರ್, ಡಿಡಿಪಿಐ ಹಾಸನ**

# ಪೌರ ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸ್ಥಳೀಯ ಸಂಸ್ಥೆ ನೌಕರರ ಸೇವೆ ಕಾಯಂ ಮಾಡಬೇಕೆಂದು ಆಗ್ರಹಿಸಿ ನಗರಸಭೆ ಪೌರ ಕಾರ್ಮಿಕರ ಸಂಘದಿಂದ ನಗರಸಭೆ ಆವರಣದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಗೊಳ್ಳಲಾಗಿದೆ.

ಪೌರ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಂ. ಯೋಗೇಶ್ ಮಾತನಾಡಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆ ನೌಕರರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸಿ ಜ್ಯೋತಿ ಸಂಜೀವಿನಿ, ಕೆಜಿಐಡಿ ಸೇರಿ ಸರ್ಕಾರದ ಎಲ್ಲಾ ಸವಲತ್ತು ಕಲ್ಪಿಸಬೇಕು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಡಿ ಕೆಲಸ ಮಾಡುತ್ತಿರುವ ನೀರು ಸರಬರಾಜು ವಾಹನ ಚಾಲಕರು, ಲೋಡರ್ಸ್ ಕ್ಲೀನರ್ಸ್, ಗಾರ್ಡನರ್, ಸ್ಯಾನಿಟರಿ ಸೂಪರ್‌ವೈಸರ್, ಯುಜಿಡಿ ಸಹಾಯಕರು ಸೇರಿ ವಿವಿಧ ವೃಂದದ ಹೊರಗುತ್ತಿಗೆ ನೌಕರರನ್ನು ನೇರ ಪಾವತಿಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಈ ಸಂಬಂಧ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಆದರೆ ಆ ನಿಟ್ಟಿನಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಹೀಗಾಗಿ 45 ದಿನಗಳ ವರೆಗೆ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ರಾಜ್ಯ ಪೌರ ನೌಕರರ ಸಂಘದ ಶಾಖಾ ಅಧ್ಯಕ್ಷ ಎನ್. ಆರ್. ವೆಂಕಟೇಶ್, ಉಪಾಧ್ಯಕ್ಷ ರಮೇಶ್, ಪ್ರಧಾನ ಕಾರ್ಯದರ್ಶಿ ರಂಜನ್, ಖಜಾಂಚಿ ಹೆಚ್.ಜಿ. ರಾಮು ಇತರರಿದ್ದರು.

### ಸೇವೆಯಲ್ಲಿ ವ್ಯತ್ಯಯ

ಮೇ 27 ರಿಂದ ಪೌರ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸುತ್ತಿರುವುದರಿಂದ ನಗರದಲ್ಲಿ ಕಸ ಸಂಗ್ರಹ, ವಿಲೇವಾರಿ, ಕುಡಿಯುವ ನೀರು ಪೂರೈಕೆ, ಚರಂಡಿ ಸ್ವಚ್ಛತೆಯಲ್ಲಿ ವ್ಯತ್ಯಯವಾಗಿದೆ. ಪೌರ ಕಾರ್ಮಿಕರ ಅನುಪಸ್ಥಿತಿಯಿಂದಾಗಿ ನಗರದೆಲ್ಲೆಡೆ ಕಸದ ರಾಶಿ ಗೋಚರಿಸುತ್ತಿದೆ.

# ಹಕ್ಕುಪತ್ರಕ್ಕಾಗಿ ಸುವರ್ಣ ಕರ್ನಾಟಕ ಸೇನೆ ಪ್ರತಿಭಟನೆ



ಅರಕಲಗೂಡು: ತಾಲ್ಲೂಕಿನ ರಾಮನಾಥಪುರದ 47 ಬಡಕುಟುಂಬಗಳಿಗೆ ಹಕ್ಕುಪತ್ರ ನೀಡಿ ಖಾತೆ ಮಾಡಿಕೊಡಬೇಕು ಎಂದು ಆಗ್ರಹಿಸಿ ಸುವರ್ಣ ಕರ್ನಾಟಕ ರಕ್ಷಣಾ ಸೇನೆ ವತಿಯಿಂದ ಗ್ರಾಮ ಪಂಚಾಯಿತಿ ಕಚೇರಿ ಎದುರು ಅಹೋರಾತ್ರಿ ಪ್ರತಿಭಟನೆ ಆರಂಭಿಸಲಾಗಿದೆ.

ಸೇನೆ ರಾಜ್ಯಾಧ್ಯಕ್ಷ ಡಾ. ರಾಘವೇಂದ್ರ ಗೌಡ ಮಾತನಾಡಿ, ಗ್ರಾಮದ 47 ಬಡ ಕುಟುಂಬಗಳು ದಶಕಗಳ ಹಿಂದೆ ಆಶ್ರಯ ಯೋಜನೆಯಡಿ ಮನೆ ನಿರ್ಮಿಸಿಕೊಂಡಿದ್ದಾರೆ. ಆದರೆ ಇಲ್ಲಿವರೆಗೆ ಹಕ್ಕುಪತ್ರ ನೀಡಿಲ್ಲ. ಈ ಸಂಬಂಧ ಅಧಿಕಾರಿ ಹಾಗೂ ಜನಪ್ರತಿನಿಧಿಗಳನ್ನು ಪ್ರಶ್ನಿಸಿದರೆ ಲಂಚ ಕೇಳುತ್ತಿದ್ದಾರೆ. ಕೂಲಿ ಮಾಡಿ ಬದುಕುತ್ತಿರುವವರು ಸಾವಿರಾರು ರೂಪಾಯಿ ಲಂಚ ನೀಡುವುದು ಸಾಧ್ಯವೇ ಎಂದು ಪ್ರಶ್ನಿಸಿದರು. ಬಡವರಿಗೆ ನ್ಯಾಯ ಒದಗಿಸಬೇಕೆಂದು ಹಲವು ತಿಂಗಳಿಂದ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುತ್ತಿದೆ. ಆದರೆ ಯಾರೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದ ಹಿನ್ನಲೆಯಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸಬೇಕಾಗಿದೆ ಎಂದು ಹೇಳಿದರು.

# ಚಿತ್ರರಂಗದಿಂದ ಮಡೆನೂರು ಮನು ಬಹಿಷ್ಕರಿಸಿ

ಹಾಸನ: ಕನ್ನಡ ಚಿತ್ರರಂಗದ ಹಿರಿಯ ನಟ ಡಾ. ಶಿವರಾಜಕುಮಾರ್ ಕುರಿತು ಹಗುರವಾಗಿ ಮಾತನಾಡಿರುವ ಮಡೆನೂರು ಮನು ಅವರನ್ನು ಚಿತ್ರರಂಗದಿಂದ ಬಹಿಷ್ಕರಿಸಬೇಕು ಹಾಗೂ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿ ಬುಧವಾರ ಡಾ. ರಾಜಕುಮಾರ್, ಡಾ. ಶಿವರಾಕುಮಾರ್ ಹಾಗೂ ಡಾ. ಪುನೀತ್ ರಾಜಕುಮಾರ್ ಅಭಿಮಾನಿಗಳ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಎನ್.ಆರ್. ವೃತ್ತದಲ್ಲಿರುವ ಡಾ. ಪುನೀತ್ ರಾಜಕುಮಾರ್ ಪುತ್ಥಳಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಮನು ವಿರುದ್ಧ ಧಿಕ್ಕಾರ ಕೂಗಿದರು.



ರಿಯಾಲಿಟಿ ಶೋ ಮೂಲಕ ಗುರುತಿಸಿಕೊಂಡ ಮಡೆನೂರು ಮನು ತನ್ನ ನಡವಳಿಕೆಯಿಂದ ಜಿಗುಪ್ಸೆ ಹುಟ್ಟಿಸಿದ್ದಾನೆ. ಈ ವ್ಯಕ್ತಿ ಹಾಸನ ಜಿಲ್ಲೆಯವನು ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತದೆ. ಕನ್ನಡ ಚಿತ್ರರಂಗದಲ್ಲಿ ಡಾ. ರಾಜಕುಮಾರ್ ಕುಟುಂಬಕ್ಕೆ ತನ್ನದೇಯಾದ ಗೌರವವಿದೆ. ಶಿವರಾಜಕುಮಾರ್ ಯಾರಿಗೂ ಕೇಡು ಬಯಸುವುದಿಲ್ಲ. ಅಂತಹ ಮೇರು ವ್ಯಕ್ತಿಯ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವುದು ಸರಿಯಲ್ಲ ಎಂದರು.

# ಬಿಡುವು ನೀಡಿದ ಮಳೆ : ಸಹಜ ಸ್ಥಿತಿಯತ್ತ ಸಕಲೇಶಪುರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ತಾಲ್ಲೂಕಿನಾದ್ಯಂತ ಕಳೆದ 8 ದಿನಗಳಿಂದ ಸುರಿದ ಮಳೆಯ ಪ್ರಮಾಣ ಬುಧವಾರ ಕಡಿಮೆಯಾಗಿದ್ದು ಆಗಾಗ ಬಿಸಿಲಿನ ವಾತಾವರಣ ಮೂಡಿದ್ದರಿಂದ ಜನಜೀವನ ಸಹಜ ಸ್ಥಿತಿಗೆ ಮರಳಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಯಲ್ಲಿ ಹೆತ್ತೂರು (106.5ಮಿ.ಮೀ.), ಹಾನುಬಾಳ್ (79.0 ಮಿ.ಮೀ.) ಮತ್ತು ಯಸಳೂರು (98.4 ಮಿ.ಮೀ.), ಬೆಳಗೋಡು (42.9 ಮಿ.ಮೀ) ಹಾಗೂ ಕಸಬಾ (71.9 ಮಿ.ಮೀ )ಮಳೆಯಾಗಿದ್ದು ಬಹುತೇಕವಾಗಿ ಎಲ್ಲೆಡೆ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿದೆ.

ಅವಧಿ ಪೂರ್ವ ಮುಂಗಾರು ಮಳೆಯಿಂದಾಗಿ ಹೇಮಾವತಿ ನದಿಗೆ ಒಳಹರಿವು ಹೆಚ್ಚಿದ್ದು, ತಾಲ್ಲೂಕಿನಾದ್ಯಂತ ರಸ್ತೆ ಸಂಪರ್ಕ ಕಡಿತ, ಮನೆ ಕುಸಿತ, ವಿದ್ಯುತ್ ಕಡಿತ ಸಮಸ್ಯೆಗಳು ಕಾಡುತ್ತಿವೆ. ಬಿಸಿಲೆ ರಸ್ತೆಯಲ್ಲಿ ಭಾರಿ ಗಾಳಿ ಮಳೆಯಿಂದಾಗಿ ವಿದ್ಯುತ್ ತಂತಿಗಳೊಂದಿಗೆ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದಿದೆ. ಇದರಿಂದ ಬಿಸಿಲೆ ಮಾರ್ಗವಾಗಿ ಸುಬ್ರಹ್ಮಣ್ಯಕ್ಕೆ ಸಂಪರ್ಕಿಸುವ ರಸ್ತೆ ಕೆಲ ಕಾಲ ಬಂದ್ ಆಗಿದ್ದು ನಂತರ ಮರವನ್ನು ತೆರವುಗೊಳಿಸಲಾಯಿತು. ವಿದ್ಯುತ್ ತಂತಿಗಳ ಮೇಲೆ ಮರ ಬಿದ್ದಿರುವುದರಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಸ್ಥಳೀಯರಿಗೆ ತೀವ್ರ ತೊಂದರೆಯಾಗಿದೆ



### ಮನೆ ಕುಸಿತ: ಕುಟುಂಬ ಬೀದಿಗೆ

ಹೆತ್ತೂರು ಹೋಬಳಿ ಅತ್ತಿಹಳ್ಳಿ ಗ್ರಾಮದಲ್ಲಿ ಲಲಿತಾ-ಸುಬ್ರಮಣ್ಯ ಎಂಬುವವರಿಗೆ ಸೇರಿದ ವಾಸದ ಮನೆ ಭಾರಿ ಗಾಳಿ ಮಳೆಗೆ ಕುಸಿದು ಬಿದ್ದಿದೆ. ಈ ಘಟನೆಯಿಂದ ಕುಟುಂಬವು ಬೀದಿಗೆ ಬಿದ್ದಿದ್ದು, ಉಳಿದಿರುವ ಗೋಡೆಯನ್ನು ರಕ್ಷಿಸಲು ಟಾರ್ಪಲ್ ಮುಚ್ಚಿ ಪರದಾಟ ನಡೆಸುತ್ತಿದ್ದಾರೆ. ಸ್ಥಳೀಯರು ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ, ಆಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಬ್ಯಾಕರವಳ್ಳಿ ಗ್ರಾಮದ ಮೆಕ್ಯಾನಿಕ್ ದಯಾನಂದ ಎಂಬುವರ ಮನೆ ಬುಧವಾರ ಬೆಳಿಗ್ಗೆ ಬಾರಿ ಮಳೆಯಿಂದ ಕುಸಿದಿದೆ. ಇವರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಗ್ರಾಮಸ್ತರು ಅಗ್ರಹಿಸಿದ್ದಾರೆ.

### ಸೇತುವೆ ಮೇಲೆ ನೀರು ಸಂಪರ್ಕ ಕಡಿತ

ತಾಲ್ಲೂಕಿನ ಬಾಣಗೇರಿ ಗ್ರಾಮದ ಬಳಿಯ ಸೇತುವೆ ಮೇಲೆ ಬಾರಿ ಪ್ರಮಾಣದ ನೀರು ಹರಿಯುತ್ತಿದ್ದು, ಬಾಣಗೇರಿ-ಹೆತ್ತೂರು-ಬ್ಯಾಕರವಳ್ಳಿ-ವಣಗೂರು ಕೂಡು ರಸ್ತೆ ಸಂಪರ್ಕ ಕಡಿತಗೊಂಡಿದೆ. ಇದರಿಂದ ಸಾರ್ವಜನಿಕರು ಮತ್ತು ವಾಹನ ಸಂಚಾರಕ್ಕೆ ತೀವ್ರ ಅಡಚಣೆಯಾಗಿದೆ. ಮಲೆನಾಡು ಭಾಗದಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಸ್ಥಿತಿ ಇನ್ನಷ್ಟು ಗಂಭೀರವಾಗಿದೆ.

# ಬಾನು ಮುಷ್ತಾಕ್‌ಗೆ ಹರ್ಷದ ಸ್ವಾಗತ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಜಿಲ್ಲೆಯ ಹೆಮ್ಮೆಯ ಸಾಹಿತಿ ಬಾನು ಮುಷ್ತಾಕ್ ಅವರು ಲಂಡನ್‌ನಿಂದ ಬುಧವಾರ ಬೆಂಗಳೂರಿನ ಅಂತಾರಾಷ್ಟ್ರೀಯ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ. ಎಂ.ವಿ. ವೆಂಕಟೇಶ್ ಹಾಗೂ ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ ಬಾನು ಮುಷ್ತಾಕ್ ಅವರಿಗೆ ಅರ್ಥಪೂರ್ಣ ಹಾಗೂ ಹರ್ಷದಿಂದ ಸ್ವಾಗತ ಕೋರಿ, ಸನ್ಮಾನಿಸಿ ಬರಮಾಡಿಕೊಂಡರು.

ನಂತರ ನಡೆದ ಸ್ವಾಗತ ಮೆರವಣಿಗೆಯಲ್ಲಿ ಡೊಳ್ಳು ಕುಣಿತ ಹಾಗೂ ಯಕ್ಷಗಾನ ತಂಡಗಳು, ರಾಜ್ಯ ಸರ್ಕಾರದ ಪ್ರತಿನಿಧಿಗಳು, ಸಾಹಿತ್ಯ ಲೋಕದ ಹಲವರು ಆತ್ಮೀಯವಾಗಿ ಬರಮಾಡಿಕೊಂಡರು.

# ಸಚಿವ ಸತೀಶ್ ಜಾರಕಿಹೊಳಿ ಪ್ರವಾಸ

ಹಾಸನ: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಮೇ 29ರ ಗುರುವಾರ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಸಕಲೇಶಪುರ ತಾಲ್ಲೂಕಿನ ಶಿರಾಡಿ ಘಾಟ್‌ನಲ್ಲಿ ಮಳೆ ಹಾನಿ ಪ್ರದೇಶ ಪರಿಶೀಲಿಸುವರು. ಸಂಜೆ 4 ಗಂಟೆಗೆ ಆಲೂರು, ಹಾಸನ, ಬೇಲೂರು ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಲೋಕೋಪಯೋಗಿ ಇಲಾಖೆ ಕಾಮಗಾರಿ ಹಾಗು ಮಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡುವರು. ನಂತರ ಮೂಡಿಗೆರೆಗೆ ತೆರಳಲಿದ್ದಾರೆ.

# ಕಸಾಪ ರಾಜ್ಯಾಧ್ಯಕ್ಷರ ಅಮಾನತಿಗೆ ಆಗ್ರಹ

## ಬೈಲಾ ತಿದ್ದುಪಡಿಯೇ ಜೋಷಿ ಉದ್ದೇಶ | ಭ್ರಷ್ಟಾಚಾರ ಮುಕ್ತವಾಗಲಿ ಪರಿಷತ್

ಹಾಸನ: ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಷಿ ಸರ್ವಾಧಿಕಾರಿ ಧೋರಣೆಯಿಂದ ಪರಿಷತ್‌ಗೆ ಅವಮಾನ ಮಾಡುತ್ತಿದ್ದು ಅವರನ್ನು ಕೂಡಲೇ ಅಮಾನತು ಮಾಡಬೇಕೆಂದು ಆಗ್ರಹಿಸಿ ಬುಧವಾರ ನಗರದಲ್ಲಿ ಸಾಹಿತಿಗಳು, ಜಾನಪದ ತಜ್ಞರು, ಜನಪರ ಹೋರಾಟಗಾರರು ಹಾಗೂ ಕನ್ನಡ ಪ್ರೇಮಿಗಳು ಪ್ರತಿಭಟನೆ ನಡೆಸಿದರು.

ಜಾನಪದ ಅಕಾಡೆಮಿ ಜಿಲ್ಲಾಧ್ಯಕ್ಷ ಡಾ. ಹಂಪನಹಳ್ಳಿ ತಿಮ್ಮೇಗೌಡ ಮಾತನಾಡಿ, ಕಸಾಪ ಜಿಲ್ಲಾಧ್ಯಕ್ಷರೂ ಕೂಡ ಜನರಿಂದ ಆಯ್ಕೆಯಾದವರು ಎಂಬ ಕನಿಷ್ಠ ಪ್ರಜ್ಞೆ ಇಲ್ಲದೆ ತಮ್ಮನ್ನು ಪ್ರಶ್ನೆ ಮಾಡುವವರಿಗೆ ನೋಟಿಸ್ ನೀಡುವ ಕೆಲಸ ಮಾಡಿದ್ದಾರೆ ಎಂದು ಜೋಷಿ ವಿರುದ್ಧ ಕಿಡಿಕಾರಿದರು.

ಕಾರ್ಯಕಾರಿ ಸಮಿತಿಯಲ್ಲಿ ತಮಗೆ ಬೇಕಾದವರನ್ನು ಮಾತ್ರ ಕೂರಿಸಿಕೊಂಡು ತಮಗೆ ಇಷ್ಟ ಬಂದಂತೆ ಪರಿಷತ್ ನಡೆಸಿಕೊಂಡು ಹೋಗುತ್ತಿದ್ದಾರೆ. ಮಂಡ್ಯ ಅಖಿಲ ಭಾರತ ಕನ್ನಡ ಸಾಹಿತ್ಯ



ಸಮ್ಮೇಳನದಲ್ಲಿ ಕೋಟ್ಯಂತರ ರೂ. ಅವ್ಯವಹಾರ ನಡೆದಿದೆ ಎಂದು ದೂರು ದಾಖಲಾಗಿದೆ. ಅದೂ ಅಲ್ಲದೆ ಆತಿಥ್ಯ ವಹಿಸಿದ್ದ ಮಂಡ್ಯ ಜಿಲ್ಲೆಗೆ ಬರಬೇಕಾದ ಹಣವನ್ನೂ ಕೊಡದೇ ಇರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಒಬ್ಬ ಅಪರಾಧಿ ಸ್ಥಾನದಲ್ಲಿರುವ ವ್ಯಕ್ತಿ ಪರಿಷತ್ತಿನ ಚುಕ್ಕಾಣಿ ಹಿಡಿದಿರುವುದು ಕನ್ನಡಿಗರ ದುರಂತವೇ ಸರಿ. ಇದೀಗ ಏಕಾಏಕಿ ಕಸಪಾ ಬೈಲಾ ತಿದ್ದುಪಡಿಗೆ ಮುಂದಾಗಿದ್ದಾರೆ. ಮಹೇಶ್ ಜೋಷಿ ಅವರು ತಮ ವರ್ತನೆಯಿಂದ ತಾವೊಬ್ಬ ದುರಹಂಕಾರಿ ಎಂಬುದನ್ನು ಸಾಬೀತು ಮಾಡಿದ್ದಾರೆ. ಇಂತಹವರು ಬೈಲಾ ತಿದ್ದುಪಡಿ ಮಾಡಲು ಮುಂದಾಗಿರುವುದು ಆತಂಕಕಾರಿ. ತಮಗಿಷ್ಟ ಬಂದಂತೆ ನಡೆದುಕೊಳ್ಳುತ್ತಿರುವ ಜೋಷಿಯನ್ನು ಅಮಾನತ್ತಿನಲ್ಲಿಟ್ಟು ಕೇಂದ್ರ ಪರಿಷತ್ತಿಗೆ ಆಡಳಿತಾಧಿಕಾರಿ ನೇಮಿಸಬೇಕೆಂದು ಆಗ್ರಹಿಸಿದರು.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕದ ಹೆಮ್ಮೆಯ ಸಂಸ್ಥೆಯಾಗಿದೆ. ನಾಡು-ನುಡಿ ರಕ್ಷಣೆಯ ಭವ್ಯ ಪರಂಪರೆ ಹೊಂದಿರುವ ಈ ಸಂಸ್ಥೆಯನ್ನು ಕನ್ನಡದ ಹಲವು ಮಹನೀಯರು ಅತ್ಯಂತ ಶ್ರದ್ಧೆ ಮತ್ತು ನಿಸ್ವಾರ್ಥದಿಂದ ಕಟ್ಟಿ ಬೆಳೆಸಿದ್ದಾರೆ. ಕನ್ನಡ ಭಾಷೆ, ಸಂಸ್ಕೃತಿ ಮತ್ತು ನಾಡಿಗೆ ಸಮಸ್ಯೆ ಎದುರಾದಾಗ ಪರಿಷತ್ತು ಕನ್ನಡಿಗರ ನೈಜ ಧ್ವನಿಯಾಗಿ ಕೆಲಸ ಮಾಡಿದ ಇತಿಹಾಸವಿದೆ ಎಂದು ಸಿಐಟಿಯು ಧರ್ಮೇಶ್ ಹೇಳಿದರು.

ಇಂತಹ ಘನತೆ ಹೊಂದಿರುವ ಪರಿಷತ್ತಿಗೆ ಪ್ರಸ್ತುತ ರಾಜ್ಯಾಧ್ಯಕ್ಷರಾಗಿರುವ ಜೋಷಿ ಅವರು, ಪರಿಷತ್ತಿನ ಘನತೆಗೆ ವಿರುದ್ಧವಾಗಿ ಅಧಿಕಾರ ನಡೆಸುತ್ತಿದ್ದಾರೆ. ರಾಜ್ಯ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಪಡೆದು ಕೊಂಡರೂ ಕನ್ನಡಪರವಾಗಿ ಕೆಲಸ ಮಾಡುತ್ತಿಲ್ಲ. ಬದಲಾಗಿ ಅಧಿಕಾರ ಚಲಾಯಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಜೋಷಿ ಅವರು ಮೈತುಂಬಾ ಭ್ರಷ್ಟಾಚಾರದ ಕೆಸರು ತುಂಬಿಕೊಂಡಿದ್ದಾರೆ.

ಬೈಲಾ ತಿದ್ದುಪಡಿ, ಆಜೀವ ಸದಸ್ಯತ್ವ ರದ್ದು, ಚುನಾವಣೆ ಮೂಲಕ ಆಯ್ಕೆಗೊಂಡಿರುವ ಜಿಲ್ಲಾಧ್ಯಕ್ಷರ ನಡುವೆ ತಾರತಮ್ಯ ಮಾಡುವ ಮೂಲಕ ಪ್ರಜಾಪ್ರಭುತ್ವ ವಿರೋಧಿ ತಿದ್ದುಪಡಿ ಮಾಡುತ್ತಿರುವುದು ಸರಿಯಲ್ಲ ಎಂದರು.

ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಉಳಿಸುವ ಹೊಣೆಗಾರಿಕೆ ಪರಿಷತ್ತಿನ ಸದಸ್ಯರು ಮತ್ತು ಕನ್ನಡಿಗರದ್ದಾಗಿದೆ ಎಂದರು.

# ಕಾರ್ಮಿಕರ ಸವಲತ್ತು ಹಂಚಿಕೆಯಲ್ಲಿ ಲೋಪ ಆಗದಿರಲಿ: ಹೆಚ್.ಕೆ. ಸುರೇಶ್



ಬೇಲೂರು: ಕಾರ್ಮಿಕರು ದೇಶದ ಶಕ್ತಿಯಾಗಿದ್ದು, ಅವರಿಗೆ ಯಾವುದೇ ಜಾತಿ, ಧರ್ಮ ಇರುವುದಿಲ್ಲ. ಕಾರ್ಮಿಕರಿಗೆ ಯಾವುದೇ ತೊಂದರೆಯಾಗದಂತೆ ಸಿಗಬೇಕಾದ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಅಧಿಕಾರಿಗಳು ವಿತರಿಸಬೇಕು ಎಂದು ಶಾಸಕ ಹೆಚ್.ಕೆ. ಸುರೇಶ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ಕಾರ್ಮಿಕರು, ಗಾರೆ ಕೆಲಸಗಾರರು, ಮರಗೆಲಸಗಾರರು, ಪೈಂಟ್ ಕೆಲಸಗಾರರು ಹಾಗೂ ವಿದ್ಯುತ್ ಕೆಲಸಗಾರರಿಗೆ ಕಾರ್ಮಿಕ ಕಿಟ್ ವಿತರಣೆ ಮಾಡಿ ಮಾತನಾಡಿದರು.

ಕಾರ್ಮಿಕರು ದಿನನಿತ್ಯವು ಕಷ್ಟಪಡುತ್ತಿದ್ದು, ಅವರನ್ನು ಆರ್ಥಿಕವಾಗಿ ಮೇಲೆತ್ತುವ ಕೆಲಸ ಮಾಡಬೇಕಾಗಿದೆ. ಇರುವ ಕೆಲಸದಲ್ಲಿ ಕುಟುಂಬದ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ ಮಾಡಿಸುವುದು ಪ್ರಸ್ತುತ ದಿನಮಾನದಲ್ಲಿ ಕಷ್ಟವಾಗಿದ್ದು, ಸರ್ಕಾರ ಇವರ ನೆರವಿಗೆ ನಿಲ್ಲಬೇಕಾಗಿದೆ. ಒಮ್ಮೆ ಕಾರ್ಮಿಕ ಕಿಟ್ ವಿತರಣೆ ಮಾಡಿದರೆ ಮೂರು ವರ್ಷಗಳ ಕಾಲ ಯಾವುದೇ ಕಿಟ್ ವಿತರಣೆ ಮಾಡಲು ಆಗುವುದಿಲ್ಲ ಎಂಬ ಸರ್ಕಾರದ ನೀತಿಯನ್ನು ಬದಲಾಯಿಸಬೇಕಾಗಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ಕಿಟ್ ವಿತರಣೆ ಮಾಡುಲು ಕ್ರಮಕ್ಕೈಗೊಳ್ಳಬೇಕು. ಇಲ್ಲದಿದ್ದರೆ ಈ ಮುಂಬರುವ ಅಧಿವೇಶನದಲ್ಲಿ ಸದನದಲ್ಲಿ ಚರ್ಚೆ ಮಾಡಿ ಕಾರ್ಮಿಕರಿಗೆ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು ಎಂದರು.

# ಬಾಣಾವರಕ್ಕೆ ಪಟ್ಟಣ ಪಂಚಾಯಿತಿ ಪಟ್ಟ

## 10 ವರ್ಷಗಳ ಹೋರಾಟಕ್ಕೆ ಸಂದ ಜಯ | ಗರಿಗೆದರಿದ ನಿರೀಕ್ಷೆಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕಡೆಗೂ ಅತ್ತು ಕರೆದು ಔತಣ ಕೊಟ್ಟರು ಎನ್ನುವ ನಾಣ್ಣುಡಿಯಂತೆ ರಾಜ್ಯ ಸರ್ಕಾರ ತಾಲ್ಲೂಕಿನ ಬಾಣಾವರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಗೆ ಉನ್ನತೀಕರಿಸಿ ಆದೇಶ ಹೊರಡಿಸಿದೆ. ಆ ಮೂಲಕ ಸ್ಥಳೀಯರ ಬಹುಕಾಲದ ಕನಸು ನನಸಾಗಿದೆ. ಜತೆಗೆ ಪರ, ವಿರೋಧದ ಮಾತುಗಳು ಅಲ್ಲಲ್ಲಿ ಕೇಳಿ ಬರಲಾರಂಭಿಸಿದ್ದು ತರಹೇವಾರಿ ಚರ್ಚೆಗೂ ವೇದಿಕೆ ಒದಗಿಸಿದೆ. ಕಳೆದ ಮಾ. 17 ರಂದು ರಾಜ್ಯಪತ್ರ (ಗೆಜೆಟ್) ಪತ್ರ ಪ್ರಕಟಿಸಲಾಗಿದ್ದು ಸಮಗ್ರ ವಿವರ ನೀಡಲಾಗಿದೆ.




### ಇತಿಹಾಸ

ಚಿತ್ರದುರ್ಗದ ಪಾಳೇಗಾರರ ದೊರೆಗಳ ಆಡಳಿತಕ್ಕೆ ಗ್ರಾಮ ಒಳಪಟ್ಟಿತ್ತು ಎನ್ನುವ ಕುರಿತಂತೆ ದಾಖಲೆಗಳಿವೆ. ಪಾಳೇಗಾರ ದಂಡನಾಯಕನೊಬ್ಬ ಇಲ್ಲಿ ಕಟ್ಟೆಯೊಂದನ್ನು ಕಟ್ಟಿಸಿ ಅದಕ್ಕೆ ಅರಸೀಕಟ್ಟೆ ಎನ್ನುವ ಹೆಸರು ನೀಡಿದ್ದಾನೆ. ಈ ಅವಧಿಯಲ್ಲಿ ರಾಜ್ಯ ರಕ್ಷಣೆಗಾಗಿ ಮದ್ದುಗುಂಡುಗಳನ್ನು ಸಂಗ್ರಹಿಡಲು ಬೃಹತ್ ಉಗ್ರಾಣ ಹಾಗೂ ವಿರೋಧಿ ರಾಜರುಗಳ ಆಕ್ರಮಣದ ಸೂಚನೆ ಅರಿಯಲು ಎತ್ತರದ ಬುರುಜು (ಪಹರೆ ಕೋಟೆ) ಕಟ್ಟಿಸಿರುವುದನ್ನು ಇಂದಿಗೂ ಕಾಣಬಹುದಾಗಿದೆ. ಪಾಳೆಗಾರ ಸಮುದಾಯಕ್ಕೆ ಸೇರಿದ ಅನೇಕ ಕುಟುಂಬಗಳು ಗ್ರಾಮದಲ್ಲಿ ನೆಲೆ ಕಂಡುಕೊಂಡಿದ್ದು ಸಮುದಾಯ ಆರ್ಥಿಕವಾಗಿ ಬಲಿಷ್ಠರಾಗುವ ಮುನ್ಸೂಚನೆ ದೊರೆತಿದೆ.

ಪ್ರಮುಖ ಹೋಬಳಿ ಕೇಂದ್ರವಾಗಿರುವ ಬಾಣಾವರ ಗ್ರಾಮದ ಜನಸಂಖ್ಯೆ ಹದಿನೈದು ಸಾವಿರ ಸಮೀಪಿಸಿದ್ದು ತಾಲ್ಲೂಕು ಕೇಂದ್ರವಾಗಿ ಗುರುತಿಸಿಕೊಳ್ಳುವತ್ತ ದಾಪುಗಾಲಿಟ್ಟಿದೆ. ಅಗತ್ಯಕ್ಕೆ ತಕ್ಕಂತೆ ಪದವಿ, ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲಾಗಿದೆ. ಕೃಷಿ ಉತ್ಪನ್ನ ಉಪಮಾರುಕಟ್ಟೆ, ಸಮುದಾಯ ಪ್ರಾಥಮಿಕ ಆರೋಗ್ಯ ಕೇಂದ್ರ, ಖಾಸಗಿ, ಸರ್ಕಾರಿ, ಅನುದಾನಿತ ಪ್ರಾಥಮಿಕ, ಪ್ರೌಢಶಾಲೆ, ನಾಡ ಕಚೇರಿ ಸೇರಿ ವಿವಿಧ ಇಲಾಖೆಯ ಬೃಹತ್ ಕಟ್ಟಡಗಳು ತಲೆ ಎತ್ತಿವೆ. ಆಂಜನೇಯಸ್ವಾಮಿ, ಶ್ರೀ ರುದ್ರೇಶ್ವರ, ಬಸವೇಶ್ವರ, ಕಾಳಿಕಾಂಬ ದೇಗುಲ, ಮಸೀದಿ, ಚರ್ಚ್ ಸೇರಿದಂತೆ ಸರ್ವಧರ್ಮಗಳ ಭಕ್ತಿ ತಾಣವಾಗಿ ಗುರುತಿಸಿಕೊಂಡಿದ್ದು ಸರ್ಕಾರ ಕಡೆಗೂ ಪಟ್ಟಣ ಪಂಚಾಯಿತಿಗೆ ಅಸ್ತು ಎನ್ನುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ.

### ಗರಿಗೆದರಿದ ನಿರೀಕ್ಷೆ

ಬಾಣಾವರ, ಕುರುವಂಕ, ಶಾನೆಗೆರೆ, ಹಿರಿಯೂರು ಹಾಗೂ ಕಾಚೀಘಟ್ಟ ಗ್ರಾಮ ಪಂಚಾಯಿತಿಗಳ ಕೆಲ ಗ್ರಾಮಗಳು ಒಳಗೊಂಡಂತೆ ಸುತ್ತಮುತ್ತಲ ಹತ್ತಾರು ಹಳ್ಳಿಗಳ ಅಂದಾಜು 26 ಚದರ ಕಿ.ಮೀ.ಗೆ ಪಟ್ಟಣ ಪಂಚಾಯಿತಿ ವ್ಯಾಪ್ತಿ ವಿಸ್ತರಿಸಲಿದೆ.

ಸರ್ಕಾರ ಕೈಗೊಂಡಿರುವ ಮಹತ್ವದ ಐತಿಹಾಸಿಕ ನಿರ್ಧಾರದಿಂದ ಪ್ರಗತಿಯ ವೇಗ ಮತ್ತಷ್ಟು ಹೆಚ್ಚುವ ನಿರೀಕ್ಷೆಗಳು ನಾಗರಿಕರಲ್ಲಿ ಗರಿಗೆದರಿವೆ. ದಶಕಗಳ ಹಿಂದೆ ಪುರಸಭೆ ಸ್ಥಾನಮಾನ ಹೊಂದಿದ್ದ ಆಡಳಿತ ವ್ಯವಸ್ಥೆಗೆ ಸರ್ಕಾರ ಕತ್ತರಿ ಹಾಕುವ ಮೂಲಕ ಬಾಣಾವರ ಹಾಗೂ ಕಾಚಿಘಟ್ಟ ಗ್ರಾಪಂಗಳಾಗಿ ವಿಭಜನೆ ಮಾಡಿದ್ದರಿಂದ ಹಿಂಬಡ್ತಿ ಹೊಂದಿದ ಗ್ರಾಮ ಎನ್ನುವ ಅಪಖ್ಯಾತಿ ದೂರಾಗಿದ್ದು ಇನ್ನು ಮುಂದೆ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದೆ.

ಬಾಣಾವರ ಗ್ರಾಮ ಪಂಚಾಯಿತಿಗೆ ಸೇರಿದ ಸರ್ವೆಕೊಪ್ಪಲು, ದೊಡ್ಡೇನಹಳ್ಳಿ, ಚನ್ನಾಪುರ, ಕಾಚೀಘಟ್ಟ ಗ್ರಾಪಂನ ಅಗ್ರಹಾರ ಎಕೆ ಕಾಲನಿ, ಚಿಕ್ಕಣ್ಣನ ಕೊಪ್ಪಲು, ಜೋಯಿಸರಕೊಪ್ಪಲು, ಮಂಜುನಾಥನಕೊಪ್ಪಲು, ಸುಳದಿಮ್ಮನಹಳ್ಳಿ, ಉಪ್ಪಿನಹಳ್ಳಿ, ಕೆಂಕೆರಹಳ್ಳಿ, ಬಾಣಾವರ ರೈಲ್ವೆ ನಿಲ್ದಾಣ, ಬಾಗಿಲುಘಟ್ಟ, ಶಾನೆಗೆರೆ ಗ್ರಾಪಂಗೆ ಸೇರಿದ ಎ.ಮಲ್ಲಾಪುರ, ಬಿ.ಮಲ್ಲಾಪುರ, ಕುರುವಂಕ ಗ್ರಾಪಂನ ಭೈರಗೊಂಡನಹಳ್ಳಿ, ಚಿಕ್ಕಬಾಣಾವರ ಹಾಗೂ ಹಿರಿಯೂರು ಗ್ರಾಪಂನ ಸಾಲಾಪುರ, ಜೋಗನಾಯಕನಕಟ್ಟೆ ಗ್ರಾಮಗಳು ಇನ್ನು ಮುಂದೆ ಬಾಣಾವರ ಪಟ್ಟಣ ಪಂಚಾಯಿತಿ ಸರಹದ್ದಿಗೆ ಸೇರಲಿವೆ ಎನ್ನುವ ಮಾಹಿತಿ ಲಭ್ಯವಾಗಿದೆ.

### ನಿರಂತರ ಹೋರಾಟ

ಬಾಣಾವರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಸಂಬಂಧ ಜಗದೀಶ್ ಶೆಟ್ಟರ್ ಸಿಎಂ ಆಗಿದ್ದ ವೇಳೆ ಮನವಿ ಸಲ್ಲಿಸಲಾಗಿತ್ತು. ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ಅವರಿಗೂ ಮುಖಂಡರು ಮನವಿ ಮಾಡಿದ್ದರು. 2024ರ ಫೆ.24ರಂದು ಬಾಣಾವರ ಗ್ರಾಮಕ್ಕೆ ಬಂದಿದ್ದ ಸಿಎಂ ಸಿದ್ದರಾಮಯ್ಯ ಪಟ್ಟಣ ಪಂಚಾಯಿತಿ ಮಾಡುವುದಾಗಿ ನೀಡಿದ್ದ ಭರವಸೆ ಇದೀಗ ಈಡೇರಿದಂತಾಗಿದೆ.

### ಮೆರಗು

ವ್ಯಾಪಾರ ವಾಣಿಜ್ಯದ ತವರು, ಕಲ್ಪತರು ನಾಡು, ಕಲೆ, ಸಂಸ್ಕೃತಿ, ಕೋಟೆ ಕೊತ್ತಲಗಳ ಬೀಡು ಎನ್ನುವ ಖ್ಯಾತಿ ಬಾಣಾವರ ಗ್ರಾಮಕ್ಕಿದೆ. ರಾಮಾಯಣ ಕಾಲದಲ್ಲಿ ಸೀತಾಮಾತೆಯನ್ನು ಹುಡುಕುವ ನಿಮಿತ್ತ ಲಂಕೆಗೆ ತೆರಳುವ ವೇಳೆ ಶ್ರೀರಾಮ ಹಾಗೂ ಲಕ್ಷ್ಮಣರು ಇದೇ ಮಾರ್ಗವಾಗಿ ಪ್ರಯಾಣ ಬೆಳಸಿದ್ದರು ಎಂಬ ಕತೆ ಜನಜನಿತವಾಗಿದೆ. ಜತೆಗೆ ಮಂಗಳೂರು-ವೆಲ್ಲೂಪುರಂ ಸಂಪರ್ಕಿಸುವ ರಾಜ್ಯ ಹೆದ್ದಾರಿ ಹಾಗೂ ಬೆಂಗಳೂರು-ಹೊನ್ನಾವರ (206) ಸಂಪರ್ಕಿಸುವ ಪ್ರಮುಖ ಚತುಷ್ಪಥ ಹೆದ್ದಾರಿಗಳು ಹಾದುಹೋಗಿವೆ.

ಧರ್ಮಸ್ಥಳ, ಹೇಮಗಿರಿ ಮಲ್ಲಿಕಾರ್ಜುನಸ್ವಾಮಿ ಕ್ಷೇತ್ರ, ಹಳೇಬೀಡು, ಬೇಲೂರು, ಚಿಕ್ಕಮಗಳೂರು, ಶ್ರವಣಬೆಳಗೊಳ ಸೇರಿದಂತೆ ಹಲವು ಪುಣ್ಯಕ್ಷೇತ್ರಗಳಿಗೆ ಸಂಪರ್ಕ ಕಲ್ಪಿಸುವ ಹೆಬ್ಬಾಗಿಲು ಎಂದು ಕರೆಯಿಸಿಕೊಂಡಿದ್ದು ಇದೀಗ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿರುವುದು ಹೊಸ ಮೆರಗು ನೀಡಲಿದೆ.

> ಕುರುವಂಕ ಗ್ರಾಮ ಪಂಚಾಯಿತಿಯಿಂದ ಭೈರಗೊಂಡನಹಳ್ಳಿ ಗ್ರಾಮವನ್ನು ಪಟ್ಟಣ ಪಂಚಾಯಿತಿಗೆ ಸೇರಿಸಿದ ಕ್ರಮ ಸರಿಯಲ್ಲ. ಇದರಿಂದ ಜಿಪಂ ಸ್ಥಾನ ಕೈತಪ್ಪುವ ಜತೆಗೆ ತೆರಿಗೆ ಭಾರ ಹೊರಬೇಕಾದ ಸನ್ನಿವೇಶ ಎದುರಾಗಲಿದೆ.
>
> **- ಚೇತನ್ ಭೈರಗೊಂಡನಹಳ್ಳಿ**

### ಜಿಪಂ ಸ್ಥಾನಕ್ಕೆ ಕತ್ತರಿ

ಬಾಣಾವರ ಗ್ರಾಮ ಪಂಚಾಯಿತಿಯನ್ನು ಸರ್ಕಾರ ಮೇಲ್ದರ್ಜೆಗೇರಿಸಿ ಆದೇಶ ಹೊರಡಿಸಿರುವುದರಿಂದ ಹಿಂದಿದ್ದ ಜಿಲ್ಲಾ ಪಂಚಾಯಿತಿ ಸ್ಥಾನಕ್ಕೆ ಕತ್ತರಿ ಬಿದ್ದಿದೆ. ಮತ್ತೊಂದೆಡೆ ಪಪಂಗೆ ಸೇರುವ ಹಳ್ಳಿಗಳ ಜನರಿಗೆ ತೆರಿಗೆ ಭಾರ ಹೆಚ್ಚುವ ಆತಂಕ ಎದುರಾಗಿದೆ. ರಿಯಲ್ ಎಸ್ಟೇಟ್ ಉದ್ಯಮಕ್ಕೂ ಪುಷ್ಟಿ ಬರಲಿದೆ ಎನ್ನುವ ಚರ್ಚೆ ಜೋರಾಗಿದೆ. ಪಪಂಗೆ ಬಡ್ತಿ ಪಡೆಯುವುದರಿಂದ ಸರ್ಕಾರದ ನೇರ ಅನುದಾನ ಲಭಿಸಲಿದ್ದು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಅವಕಾಶಗಳು ದೊರೆಯಲಿವೆ. ಜತೆಗೆ ರಸ್ತೆ, ಬೀದಿ ದೀಪ, ಕುಡಿಯುವ ನೀರು ಸೇರಿದಂತೆ ಹಲವು ಮೂಲ ಸೌಕರ್ಯಗಳು ಸ್ಥಳೀಯ ನಿವಾಸಿಗಳಿಗೆ ಲಭಿಸಲಿದ್ದು ಒಂದಿಷ್ಟು ತೆರಿಗೆ ಹೆಚ್ಚಳವಾದರೂ ಅನುಭವಿಸಲೇಬೇಕಿದೆ.

> ಬಾಣಾವರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಬೇಕು ಎನ್ನುವ ದಶಕಗಳ ಹೋರಾಟಕ್ಕೆ ಸಿಎಂ ಸಿದ್ದರಾಮಯ್ಯ ಅಸ್ತು ಎಂದಿರುವುದು ಖುಷಿ ತರಿಸಿದೆ. ತೆರಿಗೆ ಹೆಚ್ಚಳ ಎನ್ನುವುದಕ್ಕಿಂತ ತಾಲ್ಲೂಕು ಕೇಂದ್ರವಾಗಬೇಕು ಎನ್ನುವ ಇರಾದೆ ಜನರದ್ದಾಗಿದ್ದು ಮುಂದಿನ ದಿನಗಳಲ್ಲಿ ಕಾರ್ಯಗತವಾಗುವ ಅವಕಾಶಗಳಿವೆ. ನಮ್ಮ ಸಕಾರಾತ್ಮಕ ಹೋರಾಟಕ್ಕೆ ಮನ್ನಣೆ ನೀಡಿದ ಮಾಜಿ ಹಾಗೂ ಹಾಲಿ ಮುಖ್ಯಮಂತ್ರಿಗಳಿಗೆ ಆಭಾರಿಯಾಗಿದ್ದೇವೆ.
>
> **-ಬಿ.ಆರ್. ಜಯಣ್ಣ, ತಾಪಂ ಮಾಜಿ ಸದಸ್ಯ**

## ಅನುದಾನ ಕೊರತೆ: ಅರ್ಧಕ್ಕೆ ನಿಂತ ಕಟ್ಟಡ ಕಾಮಗಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾರನಹಳ್ಳಿ: ಇಲ್ಲಿನ ಪಶು ಚಿಕಿತ್ಸಾಲಯ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭವಾಗಿ ಎರಡು ವರ್ಷವಾದರೂ ಪೂರ್ಣಗೊಳ್ಳದೆ ಹಳೆಯ ಕಚೇರಿಯಲ್ಲೇ ಸಿಬ್ಬಂದಿ ಕೆಲಸ ಮಾಡುವಂತಾಗಿದೆ.

ಸುಮಾರು 42 ಲಕ್ಷರೂ. ವೆಚ್ಚದಲ್ಲಿ ಪಶು ಇಲಾಖೆ ಕಟ್ಟಡ ಆರಂಭವಾಗಿದೆ. ಎರಡು ವರ್ಷವಾದರೂ ಕಾಮಗಾರಿ ಹಣದ ಕೊರತೆಯಿಂದ ಕುಂಟುತ್ತಾ ಸಾಗುತ್ತಿದೆ. ಹೊಸ ಕಟ್ಟಡದ ನೆಲಹಾಸು ಹಾಗೂ ಕಟ್ಟಡ ಮೇಲೆ ಕಟ್ಟಿದ ರೂಮ್‌ಗಳಿಗೆ ಕೆಲಸ ಆಗಬೇಕಿದೆ. ಹಾಲಿ ಕಟ್ಟಿದ ರೂಮ್‌ನಲ್ಲಿ ಬಾಗಿಲು ಇಲ್ಲದೆ ಇರುವುದರಿಂದ ಕಿಡಿಗೇಡಿಗಳ ಅಡ್ಡೆಯಾಗಿ ಮಾರ್ಪಟ್ಟಿದೆ. ಸ್ಥಳೀಯರು ತಮ್ಮ ಮನೆಯ ಸಾಮಾಗ್ರಿಗಳನ್ನು ದಾಸ್ತಾನಿಡುವ ಗೋದಾಮು ಮಾಡಿಕೊಂಡಿದ್ದಾರೆ. ಇದಕ್ಕೆ ಹೇಳುವವರು ಕೇಳುವವರು



ಯಾರೂ ಇಲ್ಲದಂತಾಗಿದೆ. ಅನೈತಿಕ ಚಟುವಟಿಕೆಗಳ ತಾಣವಾಗಿ ಪಶು ಚಿಕಿತ್ಸಾಲಯ ಮಾರ್ಪಟ್ಟಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಹಾರನಹಳ್ಳಿ ಮುಖ್ಯ ರಸ್ತೆಯಲ್ಲಿರುವ ಪಶು ಇಲಾಖೆಯ ಹಳೆ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು ಇದನ್ನು ಮನಗಂಡ ಇಲಾಖೆ ಹೊಸ ಕಟ್ಟಡಕ್ಕೆ ಕಟ್ಟಿಸಲು ಆರಂಭ ಮಾಡಿದ್ದು ಹಾರನಹಳ್ಳಿ, ಎರೆಹಳ್ಳಿ, ಗುತ್ತಿನಕೆರೆ, ಮಾಕನಹಳ್ಳಿ, ಹೆಬ್ಬಾರನಹಳ್ಳಿ, ಕನಕಂಚೇನಹಳ್ಳಿ, ದೊಡ್ಡೇನಹಳ್ಳಿ ಸುತ್ತಮುತ್ತಲಿನ ಗ್ರಾಮದ ಜಾನುವಾರುಗಳು ಹಾರನಹಳ್ಳಿ ಪಶು ಇಲಾಖೆಯ ನಿರ್ವಹಣೆಯಲ್ಲಿ ನಡೆಯುತ್ತಿವೆ. ಈ ಆರೋಗ್ಯ ಕೇಂದ್ರ ಜಾನುವಾರುಗಳಿಗೆ ಸಂಜೀವಿನಿ ಕೇಂದ್ರ ಇದ್ದಂತೆ. ತಕ್ಷಣ ಪಶು ಇಲಾಖೆಯ ಕಾಮಗಾರಿಯನ್ನು ಮುಗಿಸುವಂತೆ ರೈತ ನಾಗರಾಜು ಅವರು ಆಗ್ರಹಿಸಿದ್ದಾರೆ.

ಹಾರನಹಳ್ಳಿ ಪಶು ಚಿಕಿತ್ಸಾಲಯ ಕಟ್ಟಡ ಹೆಚ್ಚುವರಿ ಕಮಾಗಾರಿ ಆಗಿದ್ದು ಹಣದ ಕೊರತೆ ಇಂದ ಕಮಗಾರಿ ನಿಂತಿದೆ. ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಅವರು ಒತ್ತಾಯಿಸಿದರು.

## ಎಸ್‌ಎಸ್‌ಎಲ್‌ಸಿ ಫಲಿತಾಂಶ: ಅರಕಲಗೂಡಿಗೆ ನಾಲ್ಕನೇ ಸ್ಥಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಬರಗೂರು ಸರ್ಕಾರಿ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿ ವರ್ಷಿತಗೆ ಎಸ್ಸೆಸ್ಸೆಲ್ಸಿ ಮರುಮೌಲ್ಯಮಾಪನದಲ್ಲಿ ಒಂದು ಅಂಕ ಹೆಚ್ಚಿಗೆ ಬಂದಿದ್ದು, ಒಟ್ಟು 624 ಅಂಕ ಪಡೆದು ರಾಜ್ಯಕ್ಕೆ ಎರಡನೇ ರ‍್ಯಾಂಕ್ ಮತ್ತು ತಾಲ್ಲೂಕಿಗೆ ಪ್ರಥಮಳಾಗಿ ಕೀರ್ತಿ ತಂದಿದ್ದಾಳೆ ಎಂದು ಶಾಸಕ ಎ.ಮಂಜು ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಆವರಣದಲ್ಲಿ ನಡೆದ 2025-26ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭೋತ್ಸವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ ಬಾರಿ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರ ಅವಿರತ ಶ್ರಮದಿಂದ ಜಿಲ್ಲೆಯಲ್ಲಿಯೇ ಕೊನೆ ಸ್ಥಾನದಲ್ಲಿದ್ದ ಅರಕಲಗೂಡು ತಾಲ್ಲೂಕಿಗೆ ನಾಲ್ಕನೇ ಸ್ಥಾನ ದೊರೆತಿದೆ. ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಅದು ಟಾಪ್ 3ರೊಳಗೆ ಬರಲಿದೆ ಎಂಬ ವಿಶ್ವಾಸ ನನ್ನಲಿದೆ ಎಂದು



ಹೇಳಿದರು.

ಬರಗೂರು ವಸತಿ ಶಾಲೆಯ 11 ಮಕ್ಕಳು 600ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡಿದ್ದಾರೆ. ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶ ಆಶದಾಯಕವಾಗಿದ್ದು, ಇದು ಪೋಷಕರು, ವಿದ್ಯಾರ್ಥಿಗಳ ಮೇಲೆ ಸರ್ಕಾರಿ ಶಾಲೆಗಳ ಮೇಲೆ ನಂಬಿಕೆ ಹೆಚ್ಚುವಂತೆ ಮಾಡಿದೆ. ಹೆಚ್ಚಿನ ಹಣ ತೆತ್ತು ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸದೇ ಉಚಿತವಾಗಿ ಎಲ್ಲವೂ ದೊರೆಯುವ ಸರಕಾರಿ ಶಾಲೆ ಕಾಲೇಜುಗಳಿಗೆ ಮಕ್ಕಳನ್ನು ಸೇರಿಸಬೇಕೆಂದು ಮನವಿ ಮಾಡಿದರು.

ಇತ್ತೀಚಿನ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಗಳ ಫಲಿತಾಂಶಗಳನ್ನುಅವಲೋಕಿಸಿದರೇ ಹೆಚ್ಚು ಪೈಪೋಟಿಯಿಂದ ಕೂಡಿದೆ. ಇದು ಮುಂದಿನ ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ. ಅದೇ ನಿಟ್ಟಿನಲ್ಲಿ ಶಿಕ್ಷಣದೊಂದಿಗೆ ಸಂಸ್ಕಾರವನ್ನು ನೀಡಿದಾಗ ಮಾತ್ರ ಉತ್ತಮ ಪ್ರಜೆಯಗಲು ಸಾಧ್ಯ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ ಮಾತನಾಡಿ, ಎಸ್ಸೆಸ್ಸೆಲ್ಸಿ ಮರುಮೌಲ್ಯ ಮಾಪನದಲ್ಲಿ 15ಕ್ಕೂ ಅಧಿಕ ಮಕ್ಕಳು ತೇರ್ಗಡೆಯಾಗಿದ್ದಾರೆ. ಇದರಿಂದ ನಮ್ಮ ಫಲಿತಾಂಶ 5ನೇ ಸ್ಥಾನದಿಂದ ನಾಲ್ಕಕ್ಕೆ ಏರಿಕೆಯಾಗಿದೆ. ನಮ್ಮ ಎಲ್ಲಾ ಪ್ರೌಢಶಾಲಾ ಶಿಕ್ಷಕರ ಅವಿರತ ಶ್ರಮದಿಂದ ನಿರೀಕ್ಷಿತ ಫಲಿತಾಂಶ ಪಡೆಯಲು ಸಾಧ್ಯವಾಗಿದೆ. ಈ ಸಾಲಿನಲ್ಲಿ ಪ್ರಾಥಮಿಕ ಶಿಕ್ಷಣಕ್ಕೂ ಹೆಚ್ಚು ಒತ್ತು ನೀಡುವುದು ಸಹ ನಮ್ಮ ಪ್ರಮುಖ ಗುರಿಯಾಗಿದೆ ಎಂದು ಹೇಳಿದರು.

ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲ್ಲೂಕು ಟಾಪರ್‌ಗಳಾಗಿ ಕೀರ್ತಿ ತಂದಿರುವ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಬಿಆರ್‌ಸಿ ಬಾಲರಾಜ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ. ದೈಹಿಕ ಶಿಕ್ಷಣ ನಿರ್ದೇಶಕ ನಿಂಗಯ್ಯ, ಪ್ರಾಂಶುಪಾಲ ಮಹೇಶ್, ಗಿರೀಶ್ ಇತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಮೇ -29

1968: ಮುಂಬೈನಲ್ಲಿರುವ (ಆಗಿನ ಬಾಂಬೆ) ದಾರಾ ಸಿಂಗ್ ಅವರು ಅಮೆರಿಕದ ಲೂ ಥೆಜ್ ಅವರನ್ನು ಸೋಲಿಸಿ ವಿಶ್ವ ಕುಸ್ತಿ ಚಾಂಪಿಯನ್ ಪಟ್ಟವನ್ನು ಗೆದ್ದರು. ಇದು ಭಾರತದ ಕ್ರೀಡಾ ಇತಿಹಾಸದಲ್ಲಿ ಮಹತ್ವಪೂರ್ಣ ಸಾಧನೆ.

1961: ಕೇರಳದ ಕೊಲ್ಲಂ ಜಿಲ್ಲೆಯ ಕರಾವಳಿ ಗ್ರಾಮದಲ್ಲಿ ಕಚುಬು ಮಾಂಸ ಸೇವನೆಯಿಂದ chelonitoxism ಎಂಬ ವಿಷಕಾರಿ ಅಲರ್ಜಿ ಉಂಟಾಗಿ 32 ಜನರು ಸಾವನ್ನಪ್ಪಿದರು.

1953: ಎಡ್ಮಂಡ್ ಹಿಲರಿ ಮತ್ತು ತೆನ್ಸಿಂಗ್ ನಾರ್ಗೆ ಅವರು ಏವರೆಸ್ಟ್ ಶಿಖರವನ್ನು ಮೊದಲ ಬಾರಿಗೆ ಹತ್ತಿದ ದಿನ.

1453: ಒಟ್ಟೊಮನ್ ಸೇನೆಗಳು ಕಾಂಸ್ಟಾಂಟಿನೋಪಲ್ ಅನ್ನು ವಶಪಡಿಸಿಕೊಂಡು ಬೈಜಾಂಟೈನ್ ಸಾಮ್ರಾಜ್ಯದ ಅಂತ್ಯವನ್ನು ಸೂಚಿಸಿದ ದಿನ.

**ಜನನ**

1865: ರಮಣಂದ ಚಟರ್ಜಿ, ಆಧುನಿಕ ವಿಮರ್ಶೆ ಮಾಸಪತ್ರಿಕೆಯನ್ನು ಸ್ಥಾಪಿಸಿದವರು ಮತ್ತು ಭಾರತೀಯ ಪತ್ರಿಕೋದ್ಯಮದ ಪಿತಾಮಹ.

1906: ಕನ್ಹಯ್ಯಲಾಲ್ ಮಿಶ್ರ ಪ್ರಭಾಕರ್, ಹಿಂದಿ ಪ್ರಬಂಧಕಾರರು ಮತ್ತು ಜ್ಞಾನೋದಯ ಪತ್ರಿಕೆಯ ಸಂಪಾದಕರು.

1954: ಪಂಕಜ್ ಕಪೂರ್, ಪ್ರಖ್ಯಾತ ಭಾರತೀಯ ಚಿತ್ರ, ನಟರು, ಥಿಯೇಟರ್ ಮತ್ತು ಟಿವಿ ಕಲಾವಿದರು.

**ಮರಣ**

1972: ಪೃಥ್ವಿರಾಜ್ ಕಪೂರ್, ಹಿಂದಿ ಚಿತ್ರರಂಗದ ಪಿತಾಮಹರೆಂದು ಖ್ಯಾತರಾದವರು ಮತ್ತು 'ಪೃಥ್ವಿ ಥಿಯೇಟರ್' ಸ್ಥಾಪಕರಾಗಿದ್ದರು.

1987: ಚೌಧರಿ ಚರಣ್ ಸಿಂಗ್, ಭಾರತದ 5ನೇ ಪ್ರಧಾನಮಂತ್ರಿ, ಕೃಷಿಕರ ಹಕ್ಕುಗಳಿಗಾಗಿ ಹೋರಾಡಿದವರು.

1977: ಸುನಿತಿ ಕುಮಾರ್ ಚಟರ್ಜಿ, ಪ್ರಖ್ಯಾತ ಭಾಷಾಶಾಸ್ತ್ರಜ್ಞರು ಮತ್ತು ಸಾಹಿತ್ಯವಿದ್ವಾಂಸರು.

## ಬೆಲೆ ಇದ್ದರೂ ಬೆಳೆ ಇಲ್ಲದೆ ಕಂಗಾಲಾದ ತೆಂಗು ಬೆಳೆಗಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ತೆಂಗು ಬೆಳೆಗಾರರ ಬದುಕು ಹಾವು ಏಣಿ ಆಟದಂತಾಗಿದ್ದು ಮಳೆ-ಬೆಳೆ ಇದ್ದಾಗ ಮಾರುಕಟ್ಟೆಯಲ್ಲಿ ಬೆಲೆ ಇಲ್ಲ ಬೆಲೆ ಇದ್ದಾಗ ರೈತರ ಕೈಯಲ್ಲಿ ಬೆಳೆ ಇಲ್ಲ.

ಮಳೆಯ ಕೊರತೆ ನುಸಿ ಪೀಡೆ ಸೇರಿದಂತೆ ನಾನಾ ಕೀಟ ದಾಳಿಯ ಜೊತೆಗೆ ಮಾರುಕಟ್ಟೆಯಲ್ಲಿ ಕೊಬ್ಬರಿ ಧಾರಣೆ ಕುಸಿತದಿಂದ ಕಂಗಾಲಾಗಿದ್ದ ತೆಂಗು ಬೆಳೆಗಾರರು ದಿಢೀರನೆ ಮಾರುಕಟ್ಟೆಯಲ್ಲಿ ಚೇತರಿಸಿಕೊಳ್ಳುತ್ತಿರುವ ಕೊಬ್ಬರಿ ಬೆಲೆ ಏರಿಕೆ ಕಂಡು ಖುಷಿಪಡುವುದಕ್ಕಿಂತ ಬೆಳೆದ ಬೆಳೆಯನ್ನು ನ್ಯಾಫೆಡ್ ಮೂಲಕ ಕಡಿಮೆ ಬೆಲೆಗೆ ಕೊಟ್ಟಿರುವುದಕ್ಕೆ ಕೈ ಸುಟ್ಟುಕೊಳ್ಳುವಂತಾಗಿದೆ.

ಕಳೆದ ಕೆಲವು ತಿಂಗಳಿಂದ 10 ಸಾವಿರ ರೂ. ಆಸುಪಾಸಿನಲ್ಲೇ ಇದ್ದ ಕೊಬ್ಬರಿ ಬೆಲೆ ಕಳೆದ ಕೆಲವು ತಿಂಗಳುಗಳಿಂದ ಏರುಮುಖದಲ್ಲಿ ಸಾಗುತ್ತಿದೆ. ಮಂಗಳವಾರದ ಟೆಂಡರ್‌ನಲ್ಲಿ 21 ಸಾವಿರ ರೂ. ಗಡಿ ದಾಟುವ ಮೂಲಕ ಕ್ವಿಂಟಾಲ್ ಕೊಬ್ಬರಿ ಬೆಲೆ ದಾಖಲೆ ಬರೆದಿದೆ.

ಕಷ್ಟಪಟ್ಟು ಬೆಳೆದಿದ್ದ ಬೆಳೆಯನ್ನು ಈಗಾಗಲೇ ರೈತರು ನ್ಯಾಫೆಡ್



> ಕೊಬ್ಬರಿ ಇಳುವರಿ ಕಡಿಮೆಯಾಗಿದೆ ಮತ್ತೊಂದು ಕಡೆ ಕೊಬ್ಬರಿ ಎಣ್ಣೆಗೆ ಬೇಡಿಕೆ ಹೆಚ್ಚಾಗುತ್ತಿದೆ. ಈ ಎರಡು ಕಾರಣಗಳಿಂದ ಬೆಲೆ ಏರಿಕೆಯಾಗಿತ್ತಿದ್ದು ಇನ್ನು ಬೆಲೆ ಏರಿಕೆ ಆಗುವ ಸಾಧ್ಯತೆ ಇರುವುದರಿಂದ ರೈತರು ತಮ್ಮ ಬಳಿ ಇರುವ ಕೊಬ್ಬರಿಯನ್ನು ಕಾಯ್ದು ನಂತರ ಮಾರುಕಟ್ಟೆಗೆ ತಂದರೆ ಲಾಭ ಪಡೆಯಬಹುದು.
>
> **- ಸಿದ್ದರಂಗಸ್ವಾಮಿ,**
> **ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ**

ಕೇಂದ್ರಗಳಿಗೆ ಹಾಕಿ ಕೊಬ್ಬರಿ ಖಾಲಿ ಮಾಡಿಕೊಂಡಿದ್ದು ಈಗ ಮಾರುಕಟ್ಟೆಯಲ್ಲಿ ಕ್ವಿಂಟಲ್ ಕೊಬ್ಬರಿ ದಾಖಲೆ ಪ್ರಮಾಣಕ್ಕೆ ಮಾರಾಟವಾಗುತ್ತಿದೆ. ಹಲ್ಲು ಇದ್ದವರಿಗೆ ಕಡಲೆ ಇಲ್ಲ ಕಡಲೆ ಇದ್ದವರಿಗೆ ಹಲ್ಲು ಇಲ್ಲ ಎಂಬ ಹಿರಿಯರ ಮಾತಿನಂತಾಗಿದೆ ತಾಲ್ಲೂಕಿನ ತೆಂಗು ಬೆಳೆಗಾರರ ಪರಿಸ್ಥಿತಿ.

ನಾನಾ ಕಾರಣಗಳಿಂದ ಮಾರುಕಟ್ಟೆಗೆ ಕೊಬ್ಬರಿ ಬರುತ್ತಿಲ್ಲ. ಮತ್ತೊಂದೆಡೆ ಮಹಾರಾಷ್ಟ್ರ, ದೆಹಲಿ, ಮಧ್ಯಪ್ರದೇಶ, ಉತ್ತರ ಪ್ರದೇಶ ಸೇರಿದಂತೆ ಉತ್ತರ ಭಾರತದಲ್ಲಿ ಚಳಿಗಾಲ ಆರಂಭವಾಗುತ್ತಿರುವುದರಿಂದ ಕೊಬ್ಬರಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ಕಾರಣವಾಗಿದೆ ಎನ್ನುತ್ತಾರೆ ಇಲ್ಲಿನ ವರ್ತಕರು.

ನೀರಾವರಿ ಸೌಲಭ್ಯವಿಲ್ಲ ಜೊತೆಗೆ ನಾನಾ ಕೀಟಬಾಧೆಗಳು ಇವನ್ನೆಲ್ಲವನ್ನು ದಾಟಿ ಬೆಳೆದಿದ್ದ ಅಲ್ಪಸ್ವಲ್ಪ ಕೊಬ್ಬರಿಯನ್ನು ಕೂಡ ಈಗಾಗಲೇ ಕಡಿಮೆ ಬೆಲೆಗೆ ನ್ಯಾಫೆಡ್‌ಗೆ ನೀಡಲಾಗಿದೆ. ತೆಂಗು ಬೆಳೆಗಾರರ ಹಿತ ಕಾಯುವ ಮನಸ್ಸು ಜನಪ್ರತಿನಿಧಿಗಳಿಗೂ ಇಲ್ಲ. ಅಧಿಕಾರಿಗಳಿಗೂ ಇಲ್ಲ. ಹಾಗಾಗಿ ಮಾರುಕಟ್ಟೆಯಲ್ಲಿ ಕೊಬ್ಬರಿ ಧಾರಣೆ ಏರಿಕೆಯಿಂದ ಲಾಭ ನಿಜವಾದ ರೈತರಿಗೆ ಸಿಗುತ್ತಿಲ್ಲ. ಈಗಾಗಲೇ ಕೊಬ್ಬರಿಯನ್ನು ಸಂಗ್ರಹಿಸಿ ಇಟ್ಟುಕೊಂಡಿರುವ ಮಧ್ಯವರ್ತಿಗಳು ಹಾಗೂ ನ್ಯಾಫಿಡ್ ಕೇಂದ್ರದ ಪಾಲಾಗಲಿದೆ ಎಂದು ಅಳಲು ವ್ಯಕ್ತಪಡಿಸುತ್ತಾರೆ ಕೊಬ್ಬರಿ ಬೆಳೆಗಾರ ಬೈರೇಶ್.

ಕಾಯಿ ಕೊಬ್ಬರಿ ಸೇರಿದಂತೆ ರೈತ ಬೆಳೆಯುವ ಯಾವುದೇ ಬೆಳೆಯಾಗಲಿ ಸರ್ಕಾರ ಮಾರುಕಟ್ಟೆಯಲ್ಲಿ ಸ್ಥಿರ ಬೆಲೆ ಕಾಯ್ದುಕೊಳ್ಳದೆ ಹೋದರೆ ರೈತನ ಬೆವರು ಮತ್ತು ಶ್ರಮ ಮತ್ಯಾರಿಗೋ ಲಾಭ ತಂದುಕೊಡುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ ಜಿಲ್ಲಾ ರೈತ ಸಂಘದ ಸಂಚಾಲಕ ಕನಕಾಂಚನಹಳ್ಳಿ ಪ್ರಸನ್ನ ಕುಮಾರ್.

## ಸೆಸ್ಕ್ ಅಧಿಕಾರಿಗಳೊಂದಿಗೆ ತುರ್ತು ಸಭೆ



ಹಾಸನ: ಜಿಲ್ಲಾದ್ಯಂತ ಧಾರಾಕಾರ ಮಳೆ ಹಾಗೂ ಬಿರುಗಾಳಿಗೆ ವಿದ್ಯುತ್ ಕಂಬ ಬಿದ್ದು, ತಂತಿ ತುಂಡಾಗಿ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಮಸ್ಯೆ ತಲೆದೋರಿರುವುದರಿಂದ ಸಂಸದ ಶ್ರೇಯಸ್ ಪಟೇಲ್ ಅವರು ಮಂಗಳವಾರ ತಮ್ಮ ಕಚೇರಿಯಲ್ಲಿ ಸೆಸ್ಕ್ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದರು.

ವಿದ್ಯುತ್ ಸಮಸ್ಯೆಯಿಂದ ಸಕಲೇಶಪುರ ಮತ್ತು ಬೇಲೂರು ತಾಲ್ಲೂಕಿನ ಕಾಡಂಚಿನ ಗ್ರಾಮಗಳು ಕತ್ತಲಲ್ಲೇ ದಿನದೂಡುವಂತಾಗಿದೆ. ಹಲವೆಡೆ ವಿದ್ಯುತ್ ಅವಘಡ ಉಂಟಾಗುವ ಸಂಭವವೂ ಇದೆ. ಕೆಲವೆಡೆ ವಿದ್ಯುತ್ ಕಂಬಗಳು ರಸ್ತೆ ಮೇಲೆ ಬಿದ್ದಿವೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಪರಿಹಾರ ಕ್ರಮ ಕೈಗೊಳ್ಳಬೇಕು. ತ್ವರಿತಗತಿಯ ಕಾರ್ಯಾಚರಣೆ ಮೂಲಕ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಎಂದು ಸೂಚನೆ ನೀಡಿದರು.

## ಹೊ.ನ.ಪುರದಲ್ಲಿ ಇಂದು ತಿರಂಗಾ ಯಾತ್ರೆ

ಹೊಳೆನರಸೀಪುರ: ಆಪರೇಷನ್ ಸಿಂಧೂರ ವಿಜಯೋತ್ಸವ ಅಂಗವಾಗಿ ಮೇ 29ರ ಗುರುವಾರ ಪಟ್ಟಣದಲ್ಲಿ ತಿರಂಗಾ ಯಾತ್ರೆ ಹಮ್ಮಿಕೊಳ್ಳಲಾಗಿದೆ.

ಪಟ್ಟಣದ ಚನ್ನಾಂಬಿಕ ವೃತ್ತದಿಂದ ಬೆಳಿಗ್ಗೆ 10 ರಿಂದ ತಿರಂಗಾ ಯಾತ್ರೆ ಆರಂಭಿಸಲಾಗುವುದು. ಮುಖಂಡ ಮಳಲಿ ನಾರಾಯಣ್, ಪುರಸಭಾ ಅಧ್ಯಕ್ಷ ಎಚ್.ಕೆ. ಪ್ರಸನ್ನ ನೇತೃತ್ವದಲ್ಲಿ ಯಾತ್ರೆ ನೆರವೇರಲಿದೆ. ಪಟ್ಟಣದ ಎಲ್ಲ ಪ್ರಮುಖ ವೃತ್ತಗಳು ಮತ್ತು ಬೀದಿಗಳಲ್ಲಿ 1 ಕಿ.ಮೀ. ಉದ್ದದ ತಿರಂಗಾ ಮೆರವಣಿಗೆ ನಡೆಸಲಾಗುವುದು. ಭಾರತೀಯ ಸೇನೆಯ ನೈತಿಕ ಸ್ಥೈರ್ಯ ಹೆಚ್ಚಿಸುವ ನಿಟ್ಟಿನಲ್ಲಿ ಪಕ್ಷಾತೀತವಾಗಿ ನಾಗರಿಕರು ರಾಷ್ಟ್ರಪ್ರೇಮಕ್ಕೆ ಕೈಜೋಡಿಸಲು ಬೃಹತ್ ಯಾತ್ರೆ ನಡೆಸುತ್ತಿದ್ದೇವೆ. ಧರ್ಮ ಕೇಳಿ ಮನೆಯವರ ಮುಂದೆ ಪ್ರಾಣ ಕಸಿದ ಉಗ್ರರನ್ನು ಮತ್ತು ಪಾಕಿಸ್ತಾನದ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿದ ಭಾರತೀಯ ಸೇನೆಯ ಪರಾಕ್ರಮವನ್ನು ಕೊಂಡಾಡಬೇಕಿದೆ. ಕಾಶ್ಮೀರದಲ್ಲಿನ ಪಹಲ್ಗಾಮ್‌ನಲ್ಲಿ 26 ಅಮಾಯಕರನ್ನು ಬಲಿ ಪಡೆದ ಪ್ರತೀಕಾರ ತೀರಿದೆ. ಬದಲಿಗೆ ನಮ್ಮ ಭಾರತೀಯ ಸೇನೆ, ಪಾಕಿಸ್ತಾನದ 100 ಉಗ್ರರನ್ನು ಬಲಿ ಪಡೆದಿದೆ. ಇಂತಹಾ ಪರಾಕ್ರಮ ಮೆರೆದ ಸೈನಿಕರಿಗೆ ಕೃತಜ್ಞತೆ ತಿಳಿಸುವ ಸಲುವಾಗಿ ಹೆಮ್ಮೆಯಿಂದ ಎಲ್ಲ ರಾಷ್ಟ್ರಪ್ರೇಮಿಗಳು ಪಾಲ್ಗೊಳ್ಳಬೇಕು ಎಂದು ಎಚ್.ಕೆ. ಪ್ರಸನ್ನ ಕೋರಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248